## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ:1056/2024

**ಸಾಕ್ಷಿಯನ್ನು ದಿಃ 21.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಸಿ.ಎಸ್ ಬಸವರಾಜು | ಸಿಡಬ್ಲ್ಯೂ:5 | ಪಿಡಬ್ಲ್ಯೂ:5 |
| ತಂದೆಯ ಹೆಸರು | ಸಿ.ಎಂ. ಸಿದ್ದಪ್ಪ | | |
| ವಯಸ್ಸು | 63 ವರ್ಷ | | |
| ಉದ್ಯೋಗ | ನಿವೃತ್ತ ಎಸ್.ಬಿ.ಐ ಸಿಬ್ಬಂದಿ | | |
| ವಾಸಸ್ಥಳ | ಮೈಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅಮಾನತ್ತು ಮಹಜರ್ ಆಗಿದ್ದು, ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ. 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 7(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ 2020 ನೇ ಸಾಲಿನಲ್ಲಿ ಮಾಡಿರುತ್ತೇನೆ. ವಾಹನ ಅಮಾನತ್ತು ಪಡಿಸಿಕೊಳ್ಳುತ್ತಿದ್ದೇವೆ ಸಹಿ ಮಾಡಿ ಎಂದು ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ಹಾಗೆ ಸಹಿ ಮಾಡಿದಾಗ ನನ್ನ ಜೊತೆ ಇನ್ನೊಬ್ಬರು ಇದ್ದರು. ಆಗ ಸಮಯ ಮಧ್ಯಾಹ್ನ 3.00 ಗಂಟೆ ಮೇಲೆ ಆಗಿತ್ತು. ಠಾಣಾ ಆವರಣದಲ್ಲಿ ಒಂದು ಫೋಟೊ ತೆಗೆದಿದ್ದು, ಅದನ್ನು ನೋಡಿ ಗುರುತಿಸಿರುತ್ತಾರೆ,ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಪ್ರಮಾಣ ಪತ್ರ ಇಲ್ಲದ ಕಾರಣ ಸಿಡಿಯನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲು ಸಸಅ ರವರಿಂದಃ-</u>**

ದಿಃ 27.05.2024 ರಂದು ನಾನು ಬಿಳಿಕೆರೆ ಠಾಣಾ ಆವರಣದಲ್ಲಿ ನಿಪಿ. 7 ಕ್ಕೆ ಸಹಿ ಮಾಡಿದ್ದೆ ಎಂದರೆ ನಾನು ದಿನಾಂಕ ಮರೆತಿದ್ದೇನೆ. ನಾನು ಸಹಿ ಮಾಡುವಾಗ ಅಭಿಶೇಕ್ ಎನ್ನುವವರು ನನ್ನ ಜೊತೆ ಇದ್ದರು ಎಂದರೆ ಸರಿಯಲ್ಲ. ಆಗ ಸಮಯ 11 ರಿಂದ 11.45 ಆಗಿತ್ತು ಎಂದರೆ ಸಾಕ್ಷಿ ಮಧ್ಯಾಹ್ನ ಮೇಲೆ ಆಗಿರಬಹುದು ಎನ್ನುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹಚ್.ಜಿ.ಕೆ ವಕೀಲರಿಂದಃ</u>**

ನನಗೆ ಅಭಿಶೇಕ್ ಎಂಬುವವರ ಪರಿಚಯ ಇಲ್ಲ. ಅಮಾನತ್ತು ಮಹಜರ್ ಯಾವ ವಾಹನಕ್ಕೆ ಸಂಬಂಧಿಸಿದಂತೆ ಮಾಡಿದರು ಎಂದರೆ ಅದರ ನಂಬರ್ ನನಗೆ ಗೊತ್ತಿಲ್ಲ. ಅದು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಅಮಾನತ್ತು ಮಹಜರ್ ನಲ್ಲಿ ಏನೆಲ್ಲಾ ಬರೆದಿದ್ದರು ಎಂದು ನಾನು ಓದಿಲ್ಲ. ಅಲ್ಲಿ ಯಾರ್ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಪೊಲೀಸರ ಹೇಳಿದ ಮೇರೆಗೆ ವಾಹನ ಸೀಜ್ ಮಾಡುವ ಸಂಬಂಧ ಸಹಿ ಮಾಡಿರುತ್ತೇನೆ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.